ವಾರದ ಪತ್ರ

## ದಸರಾ ಮರುಪ್ರಸಾರ ಮಾಡಲಿ

ವಿಶ್ವವಿಖ್ಯಾತ ದಸರಾ ವಿಶ್ವ ಪ್ರಸಿದ್ಧಿ ಪಡೆದಿದೆ. ಈ ವರ್ಷ ಕೊರೊನಾ ಕಾರಣದಿಂದಾಗಿ ಸರಳ ದಸರಾ ನಡೆಸಲು ವ್ಯವಸ್ಥೆ ತೀರ್ಮಾನ ಮಾಡಿದೆ. ಈ ನಿಲುವು ಸರಿಯಾಗಿದೆ. ದಸರಾ ಉದ್ಘಾಟನೆಯನ್ನು ಡಾಕ್ಟರ್ ಮಂಜುನಾಥ್ (ಕೊರೊನಾ ವಾರಿಯರ್ಸ್) ಅವರು ನೆರವೇರಿಸಿದರು. ಇದು ಸಂತೋಷ ತಂದಿರುವ ವಿಷಯ. ಈ ಬಾರಿ ಜಂಬೂಸವಾರಿಯ ವಿಜಯದಶಮಿಯಂದು ಸಾಂಪ್ರದಾಯಕವಾಗಿ ಪೂಜೆ ಮಾಡಿ ಸಾಂಕೇತಿಕವಾಗಿ ಮೆರವಣಿಗೆ ಮಾಡಲು ತೀರ್ಮಾನಿಸಿದ್ದಾರೆ.

ಇದು ಸಾರ್ವಜನಿಕರಿಗೆ ಬೇಸರ ತಂದರೂ ಜನರ ಹಿತದೃಷ್ಟಿಯಿಂದ ಒಳಿತೇ ಆಗಿದೆ. ಈ ವರ್ಷ ವಿಜಯದಶಮಿಯಂದು ಅರಮನೆ ಆವರಣದಲ್ಲಿ ಸಾಂಪ್ರದಾಯಿಕ ಪೂಜೆ ನಡೆದ ನಂತರ ಹಿಂದಿನ ವರ್ಷದ ಜಂಬೂಸವಾರಿಯನ್ನು ಮತ್ತು ಪಂಜಿನ ಕವಾಯಿತು ಪ್ರಸಾರ ಮಾಡಬಹುದು.

—ಎಂ.ಎಸ್. ಉಷಾ ಪ್ರಕಾಶ್

## ಕವಿ ಕಾವ್ಯಾನುಸಂಧಾನ ಹೆಚ್ಚಲಿ

ಕನ್ನಡ ಕಾವ್ಯ ಪ್ರಪಂಚದಲ್ಲಿ ಎಚ್ಚೆಸ್ವಿ ಎಂದೇ ಪ್ರಸಿದ್ಧರಾದ ಎಚ್.ಎಸ್. ವೆಂಕಟೇಶ್ ಮೂರ್ತಿ ಅವರ ಸಂದರ್ಶನವನ್ನು ಚಂದನ ವಾಹಿನಿ ಪ್ರಸಾರ ಮಾಡಿತು. ಚಿಂತಕ ನರಹಳ್ಳಿ ಬಾಲಸುಬ್ರಹ್ಮಣ್ಯಂ ಸಂದರ್ಶಿಸಿದರು. ಕವಿಯ ಬಾಲ್ಯದ ನೆನಪಿನ ಸುರಳಿ ಬಿಚ್ಚುತ್ತ ಕವಿತೆ ಮೊಳಕೆ ಒಡೆದ ಕುರಿತು ಕುತೂಹಲಕರ ಸಂಗತಿಗಳನ್ನು ಪ್ರೇಕ್ಷಕರ ಮುಂದಿಟ್ಟರು.

ಕವಿಯ ತಾಯಿ ಮತ್ತು ಅಜ್ಜಿ ದಿನ ಹಾಡುತ್ತಿದ್ದ ಭಕ್ತಿಗೀತೆಗಳು, ದಾಸ, ಪದಗಳು, ಇವರನ್ನು ಗಾಢವಾಗಿ ಪ್ರಭಾವಿಸಿದ್ದವು. ಅಲ್ಲದೇ ದೇವರ ಗುಡಿಯಿಂದ ಮುಂಜಾನೆ ಕೇಳಿ ಬರುತ್ತಿದ್ದ ಕನ್ನಡ ಕಾವ್ಯಗಳ ಗಮಕ ವಾಚನ ತುಂಬಾ ಪ್ರಭಾವ ಬೀರಿದವು. ಕಾವ್ಯದ ಮಾರ್ಗದಲ್ಲಿ ಹೊರಳಲು ಅನುವು ಮಾಡಿಕೊಟ್ಟವೆಂದೂ, ಕಾವ್ಯವೇ ಅಭಿವ್ಯಕ್ತಿಗೆ ಒಳ್ಳೆಯ ಮಾರ್ಗ ಎಂದು ಅನಿಸಿದ್ದನ್ನು ವಿವರಿಸಿದರು.

ತಾಯಿಯ ಆಶ್ರಯದಲ್ಲಿ ಬೆಳೆದ ರೀತಿಯನ್ನು, ತಾಯಿಯ ಪ್ರೀತಿ, ಮಧುರ ಭಾವನೆಗಳು ತಮ್ಮ ಕವಿತೆಗಳಲ್ಲಿ ಮೂರ್ತವೆತ್ತಿದ್ದನ್ನು ನಿರೂಪಿಸಿದ್ದು ತುಂಬಾ ಆಪ್ತವೆನಿಸಿತು. ಹಳೆಗನ್ನಡ ಕಾವ್ಯಗಳ ಅಧ್ಯಯನ, ಸಾಹಿತ್ಯ ಸಮ್ಮೇಳನ, ಪುಸ್ತಕ ಮಾರಾಟ, ಕನ್ನಡ ಭಾಷೆಯನ್ನು ಬೆಳೆಸುವ ನಿಟ್ಟಿನಲ್ಲಿ ಕೈಕೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚೆ ನಡೆಯಿತು. ಯುವ ಲೇಖಕರಿಗೆ ಪ್ರಯೋಜನಕಾರಿಯಾದ ಸಂವಾದ ಇದಾಗಿತ್ತು. ಇನ್ನಷ್ಟು ಇಂಥ ಕಾರ್ಯಕ್ರಮಗಳು ಮೂಡಿ ಬರಲಿ.

—ಕೆ.ಪಿ. ರಾಮಗುಂಡಿ ಬೈಲಹೊಂಗಲ

## ನವೀನ ನವಶಕ್ತಿ ದರ್ಶನ

ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾದ 'ನವಶಕ್ತಿ ದರ್ಶನ' ಕಾರ್ಯಕ್ರಮ ತುಂಬಾ ಚೆನ್ನಾಗಿ ಮೂಡಿ ಬಂತು. ಮನೆಯಲ್ಲೇ ಕುಳಿತು ಕರ್ನಾಟಕದ ಬೇರೆ ಬೇರೆ ಭಾಗದ ದೇವಿ ದೇವಸ್ಥಾನಗಳನ್ನು ನೋಡಿದ ಅನುಭವವಾಗಿತ್ತು. ಕೊಲ್ಲೂರು ಮೂಕಾಂಬಿಕೆ, ಶೃಂಗೇರಿ ಶಾರದಾಂಬೆ, ಮಂಗಳೂರಿನ ಮಂಗಳಾದೇವಿ, ಸವದತ್ತಿ ಎಲ್ಲಮ್ಮ ಸೇರಿದಂತೆ ಕರ್ನಾಟಕದ ವಿವಿಧ ಭಾಗದ ದೇವಿ ದೇಗುಲ ದರ್ಶನದೊಂದಿಗೆ ಕ್ಷೇತ್ರ ಪರಿಚಯ ಮಾಡಿಸಿದ ಈ ಕಾರ್ಯಕ್ರಮ ತುಂಬಾ ಇಷ್ಟವಾಯ್ತು. ಕಲರ್ಸ್ ವಾಹಿನಿಯಿಂದ ಇಂತಹ ಇನ್ನಷ್ಟು ಕಾರ್ಯಕ್ರಮಗಳು ಮೂಡಿಬಂದರೆ ಉತ್ತಮ. ಪ್ರತಿ ಹಬ್ಬದ ಸಮಯದಲ್ಲೂ ಕರ್ನಾಟಕ ವಿಶೇಷ ದೇಗುಲಗಳ ಪರಿಚಯ ಹಾಗೂ ಕ್ಷೇತ್ರದರ್ಶನ ಕಾರ್ಯಕ್ರಮ ಮಾಡಿದರೆ ಉತ್ತಮ.

ಪ್ರತಿದಿನ ಕೊರೊನಾ, ಪ್ರವಾಹ ಎಂದು ಟೀವಿಯಲ್ಲಿ ನೋಡಿ ನೋಡಿ ಬೇಸರವಾಗಿದ್ದ ಮನಗಳಿಗೆ ಈ ಕಾರ್ಯಕ್ರಮ ದೇವರ ಮೇಲೆ ಭಕ್ತಿ ಮೂಡುವಂತೆ ಮಾಡಿದೆ.

—ಹುಣ್ಣಿಮೆ, ಉಡುಪಿ

## ರಾಜಕುಮಾರ್ ವಿಶೇಷ ಅಲ್ಲ

ಈಗ ಚಂದನ ವಾಹಿನಿಯಲ್ಲಿ 'ಥಟ್ ಅಂತ ಹೇಳಿ' ಜಾಲ ಕ್ವಿಜ್ ಕಾರ್ಯಕ್ರಮ ಪ್ರಾರಂಭವಾಗಿದೆ. ಸಹಜವಾಗಿ ಅದನ್ನು ನಡೆಸಿಕೊಡುವ ಕ್ವಿಜ್ ಮಾಸ್ಟರ್ ಯಾವ ಕ್ಷೇತ್ರದ, ಯಾವ ವ್ಯಕ್ತಿಯ ಬಗ್ಗೆ ಬೇಕಾದರೂ ಪ್ರಶ್ನೆಗಳನ್ನು ಕೇಳಬಹುದಾದ ಸ್ವಾತಂತ್ರ್ಯ, ನಿಯಮಗಳಿರುವುದು ಸ್ವಾಭಾವಿಕ. ಇಂತಹ ಪ್ರಶ್ನೆಗಳನ್ನೇ ಕೇಳಬೇಕು ಎಂಬ ಶಾಸನವಿರಲಾರದು.

ಆದರೆ, ಸುಮಾರು ಎರಡು ವಾರಗಳಿಂದ ಮೊದಲ ಸುತ್ತಿನಲ್ಲೆಲ್ಲ ಕನ್ನಡದ ವರನಟ ರಾಜಕುಮಾರ್ ಬಗ್ಗೆಯೇ ಪ್ರಶ್ನೆಗಳನ್ನು ಕೇಳುತ್ತಾ ಬರುತ್ತಿರುವುದು ವಿಪರೀತವಾಯಿತೇನೋ ಅನಿಸುತ್ತದೆ. ಇದೇನೂ ರಾಜಕುಮಾರ್ ವಿಶೇಷ ಕಾರ್ಯಕ್ರಮ ಅಲ್ಲ.

ಚಲನಚಿತ್ರ ಕ್ಷೇತ್ರವೇ ಅಲ್ಲದೆ ಕನ್ನಡ ಸಾಹಿತ್ಯ ಕ್ಷೇತ್ರ, ಕರ್ನಾಟಕ ಕ್ರೀಡಾ ಕ್ಷೇತ್ರ, ಮಹಿಳಾ ಸಾಧಕರ ಬಗ್ಗೆಯೂ ಪ್ರಶ್ನೆಗಳಿದ್ದರೆ ಕಾರ್ಯಕ್ರಮ ವೈವಿಧ್ಯಮಯವಾಗಿರುವುದರಲ್ಲಿ ಸಂದೇಹವಿಲ್ಲ. ಒಬ್ಬ ವ್ಯಕ್ತಿಯ ಬಗ್ಗೆಯೇ ವಿಪರೀತ ಆದರೆ ವ್ಯಕ್ತಿಪೂಜೆಯ ದ್ಯೋತಕವೆನಿಸುತ್ತದೆ.

—ಶ್ರೀಧರ್, ಬೆಂಗಳೂರು

## ನಿರ್ದೇಶಕರ ಗಮನಕ್ಕೆ

ಕನ್ನಡ ಕಲರ್ಸ್‌ನಲ್ಲಿ ಪ್ರಸಾರವಾಗುತ್ತಿರುವ 'ಕನ್ನಡತಿ' ನಿಜಕ್ಕೂ ಅತ್ಯುತ್ತಮ ಧಾರಾವಾಹಿ ಎನ್ನಬಹುದು. ಇಂತಹ ಕಥೆ ಮುಂದಿನ ದಿನಗಳಲ್ಲಿ ದಿಕ್ಕು ತಪ್ಪದಂತೆ ಮುಂಜಾಗ್ರತೆಯನ್ನು ನಿರ್ದೇಶಕರು ತೆಗೆದುಕೊಳ್ಳಬೇಕು ಎನ್ನುವುದು ನಮ್ಮ ಕಾಳಜಿ.

ಯಾವುದೇ ರೂಪದಲ್ಲಿ ಕಥೆಗೆ ಹೊಸ ತಿರುವು ನೀಡಿದರೂ ಬೇಡ ಎನ್ನುವುದಿಲ್ಲ. ಮೂಲ ಸ್ವರೂಪದವನ್ನು ಬದಲಿಸಬೇಡಿ. ಇಲ್ಲಿಯವರೆಗೆ ನೋಡಿರುವ ಈ ಧಾರಾವಾಹಿಗೆ ಮುಂದೆ ಕಳಂಕ ಬರಬಾರದು. ನನ್ನ ಪ್ರಕಾರ ಸಾನ್ಯ ಎಂಬ ದುಷ್ಟೇ ರತ್ನಮಾಲ ಮನೆಯಲ್ಲಿ ಆಡುತ್ತಿರುವ ಆಟಗಳು ಕಾನೂನಿಗೆ ವಿರುದ್ಧವಾಗಿವೆ. ಅವಳ ಪಾತ್ರ ಕಥೆಯಿಂದ ದೂರವಾದರೂ ಅದು ಕಾನೂನಿನ ವ್ಯಾಪ್ತಿಯಲ್ಲಿ ಇರಬೇಕು. ಇಲ್ಲದಿದ್ದಲ್ಲಿ ಕಥೆಯ ಆಶಯಕ್ಕೆ ಅಪಚಾರ ಮಾಡಿದಂತೆ ಆಗುವುತ್ತದೆ.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಇವತ್ತಿಗೂ ಧ್ರುವತಾರೆ...

ವ್ಯಾಪಾರ, ವ್ಯವಹಾರದಲ್ಲಿ ಮಧ್ಯವರ್ತಿಗಳಿಗೆ ಸಿಂಹಪಾಲು ಲಾಭ ಸಿಗುತ್ತಿದೆ. ಅದನ್ನು ತಪ್ಪಿಸಲು ದುಡಿಯುವ ರೈತನಿಗೆ ನ್ಯಾಯ ಸಿಗಬೇಕು ಎಂಬ ತತ್ವ ಸಾರುವ ರಾಜಕುಮಾರ್ ಅಭಿನಯದ 'ಧ್ರುವ ತಾರೆ' ಸಿನಿಮಾ ಇತ್ತೀಚೆಗೆ ಉದಯ ಮೂವೀಸ್ ವಾಹಿನಿಯಲ್ಲಿ ಪ್ರಸಾರವಾಯಿತು. 35 ವರ್ಷಗಳ ಹಿಂದೆ ಬಿಂಬಿತವಾದ ವಿಚಾರ ಈಗಲೂ ಪ್ರಸ್ತುವಾಗಿದೆ. ರಾಜಕುಮಾರ್ ಸಿನಿಮಾ ಅಂದರೆ ಒಂದು ಪ್ರಾಯೋಗಿಕ ಅಂಶವಿರುತ್ತದೆ.

—ಕೆ. ಹೊನ್ನಪ್ಪ, ಕ್ಯಾತ್ಸಂದ್ರ

## ಎರಗುವ ಮಾಧ್ಯಮ

ಕೊರೊನಾ ಸಮಯದಲ್ಲಿ ವಿಧಿವಶರಾದ ಯುವ ನಟರೊಬ್ಬರ ಪತ್ನಿಯ ಹೆರಿಗೆಯ ವಿಚಾರವನ್ನು ಬಹುತೇಕ ದೃಶ್ಯ ಮಾಧ್ಯಮಗಳು ವೈಭವೀಕರಿಸುತ್ತಿವೆ. ಮಾತ್ರವಲ್ಲ, ಎಡಬಿಡದೇ ಕುಟುಂಬದವರನ್ನು ಮಾತನಾಡಿಸುತ್ತಿದ್ದಾರೆ. ನಟನ ಅಗಲಿರುವ ನಟನ ಬಗ್ಗೆ ಈಗ ಕುತೂಹಲ ಮೂಡಿಸುವ ಪ್ರಶ್ನೆಗಳನ್ನು ಕೇಳುವುದು ವಿಪರ್ಯಾಸವೇ ಸರಿ. ಮಗುವಿಗೆ ಏನು ಹೆಸರು ನಿರ್ಧರಿಸಿದ್ದೀರಿ? ನಿಮ್ಮ ಮುಂದಿನ ಯೋಜನೆಗಳೇನು? ಸಕಲರೂ ತಮ್ಮ ಜೀವನದಲ್ಲಿ ವಿವಿಕ್ತತೆ ಬಯಸುವುದು ವಾಸ್ತವ ಎನ್ನುವದನ್ನು ದೃಶ್ಯ ಮಾಧ್ಯಮಗಳು ಅರಿತು ಜವಾಬ್ದಾರಿಯಿಂದ ವರ್ತಿಸಿದರೆ ಸೂಕ್ತವಾದೀತು. ಪರರ ವೈಯಕ್ತಿಕ ವಿಚಾರಗಳು ಬ್ರೇಕಿಂಗ್ ನ್ಯೂಸ್ ಆಗುವುದು ಬೇಡ.

—ರಾಜೀವ್ ಮಾಗಲ್, ಸಕಲೇಶಪುರ